## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ2/337/18-19 ದಿನಾಂಕ 12.06.2018

### ಜಾಹೀರಾತು ಸಂಖ್ಯೆ : 2/2018

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಅವಶ್ಯಕವಿರುವ ವಿಭಾಗ ಮಟ್ಟದ ಮೇಲ್ವಿಚಾರಕೇತರ ಹುದ್ದೆಯಾದ "ಭದ್ರತಾ ರಕ್ಷಕ" ದರ್ಜೆ-3ರ ಹುದ್ದೆಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಪದವೃಂದ ಮತ್ತು ನೇಮಕ) ನಿಯಮಾವಳಿಗಳು 1982 ಮತ್ತು ತದನಂತರದ ತಿದ್ದುಪಡಿ ಆದೇಶಗಳ ಅನುಸಾರ ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ (ON LINE) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿಭಾಗವಾರು ವರ್ಗೀಕರಣವನ್ನು ಈ ಕೆಳಗಿನಂತೆ ಪ್ರಕಟಿಸಲಾಗಿದೆ.

### ಭದ್ರತಾ ರಕ್ಷಕ, ದರ್ಜೆ-3 ರ ಮೇಲ್ವಿಚಾರಕೇತರ ಹುದ್ದೆಗಳು (200 ಹುದ್ದೆಗಳು)
### (ವಿಭಾಗವಾರು ರೋಸ್ಟರ್ ಅನುಸಾರ ವರ್ಗೀಕರಣ)

#### ರಾಮನಗರ ವಿಭಾಗ-22 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | | | 1 | | | | 4 | 6 |
| ಮಹಿಳೆ | 1 | 1 | | 1 | | 1 | 1 | 4 | 9 |
| ಗ್ರಾಮೀಣ | 1 | | 1 | 2 | | | | 2 | 6 |
| ಮಾ.ಸೈ. | | | | | | | | 1 | 1 |
| ಒಟ್ಟು | 3 | 1 | 1 | 4 | 0 | 1 | 1 | 11 | 22 |

#### ತುಮಕೂರು ವಿಭಾಗ-15 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | | | | | | | | 1 | 1 |
| ಮಹಿಳೆ | 1 | | | 1 | | | | 2 | 4 |
| ಗ್ರಾಮೀಣ | | | 1 | 1 | 1 | | 1 | 2 | 6 |
| ಮಾ.ಸೈ. | 1 | | | 1 | | | | 1 | 3 |
| ಕ.ಮಾ. | | | | | | | | 1 | 1 |
| ಒಟ್ಟು | 2 | 0 | 1 | 3 | 1 | 0 | 1 | 7 | 15 |

#### ಮಂಡ್ಯ ವಿಭಾಗ-10 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | | | | 1 | | | | | 1 |
| ಮಹಿಳೆ | 1 | | 1 | 1 | | | | 2 | 5 |
| ಗ್ರಾಮೀಣ | 1 | | | | | | | 2 | 3 |
| ಕ.ಮಾ. | | | | | | | | 1 | 1 |
| ಒಟ್ಟು | 2 | 0 | 1 | 2 | 0 | 0 | 0 | 5 | 10 |

## ಚಾಮರಾಜನಗರ ವಿಭಾಗ-12 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | | | 1 | | 1 | 1 | | 4 |
| ಮಹಿಳೆ | | | | | | | | 3 | 3 |
| ಗ್ರಾಮೀಣ | 1 | | | 1 | | | | 2 | 4 |
| ಮಾ.ಸೈ. | | | | | | | | 1 | 1 |
| ಒಟ್ಟು | 2 | 0 | 0 | 2 | 0 | 1 | 1 | 6 | 12 |

## ಮೈಸೂರು ನಗರ ವಿಭಾಗ-10 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | | | 1 | | | | | 2 |
| ಮಹಿಳೆ | 1 | | 1 | 1 | | | | 3 | 6 |
| ಗ್ರಾಮೀಣ | | | | | | | | 1 | 1 |
| ಕ.ಮಾ. | | | | | | | | 1 | 1 |
| ಒಟ್ಟು | 2 | 0 | 1 | 2 | 0 | 0 | 0 | 5 | 10 |

## ಮೈಸೂರು ಗ್ರಾಮಾಂತರ ವಿಭಾಗ-13 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | | | 1 | | | | 2 | 4 |
| ಮಹಿಳೆ | | 1 | | | 1 | | 1 | 2 | 5 |
| ಗ್ರಾಮೀಣ | | | | 1 | | | | 1 | 2 |
| ಮಾ.ಸೈ. | | | | | | | | 1 | 1 |
| ಯೋನಿ.ಅ | | | | | | | | 1 | 1 |
| ಒಟ್ಟು | 1 | 1 | 0 | 2 | 1 | 0 | 1 | 7 | 13 |

## ಮಂಗಳೂರು ವಿಭಾಗ-12 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | | | | | | | | 1 | 1 |
| ಮಹಿಳೆ | | 1 | 1 | 1 | 1 | | | 2 | 6 |
| ಗ್ರಾಮೀಣ | 1 | | | 1 | | | | 1 | 3 |
| ಕ.ಮಾ. | | | | | | | | 1 | 1 |
| ಯೋನಿ.ಅ | | | | | | | | 1 | 1 |
| ಒಟ್ಟು | 1 | 1 | 1 | 2 | 1 | 0 | 0 | 6 | 12 |

### ಪುತ್ತೂರು ವಿಭಾಗ-20 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | | | 1 | | | | 2 | 4 |
| ಮಹಿಳೆ | 1 | 1 | 1 | 1 | 1 | | 1 | 3 | 9 |
| ಗ್ರಾಮೀಣ | 1 | | | 1 | | | | 2 | 4 |
| ಮಾ.ಸೈ. | | | | | | | | 1 | 1 |
| ಕ.ಮಾ. | | | | | | | | 1 | 1 |
| ಯೋಜ.ಪ | | | | | | | | 1 | 1 |
| ಒಟ್ಟು | 3 | 1 | 1 | 3 | 1 | 0 | 1 | 10 | 20 |

### ಚಿಕ್ಕಮಗಳೂರು ವಿಭಾಗ-15 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | | | 1 | | | | 2 | 4 |
| ಮಹಿಳೆ | | 1 | | | 1 | 1 | 1 | 2 | 6 |
| ಗ್ರಾಮೀಣ | 1 | | | 1 | | | | 1 | 3 |
| ಮಾ.ಸೈ. | | | | | | | | 1 | 1 |
| ಯೋಅ.ಪ | | | | | | | | 1 | 1 |
| ಒಟ್ಟು | 2 | 1 | 0 | 2 | 1 | 1 | 1 | 7 | 15 |

### ಕೆ.ಜಿ.ಎಸ್. ವಿಭಾಗ-48 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 3 | 1 | 1 | 3 | 1 | 1 | 1 | 6 | 17 |
| ಮಹಿಳೆ | 2 | 1 | 1 | 2 | 1 | 1 | 1 | 8 | 17 |
| ಗ್ರಾಮೀಣ | 2 | | | 2 | | | | 6 | 10 |
| ಮಾ.ಸೈ. | | | | | | | | 2 | 2 |
| ಕ.ಮಾ. | | | | | | | | 1 | 1 |
| ಯೋಜ.ಪ | | | | | | | | 1 | 1 |
| ಒಟ್ಟು | 7 | 2 | 2 | 7 | 2 | 2 | 2 | 24 | 48 |

### ಶಿವಮೊಗ್ಗ ವಿಭಾಗ-10 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 1 | 1 | 1 | | | | 2 | 6 |
| ಮಹಿಳೆ | 1 | | | | | | | 2 | 3 |
| ಗ್ರಾಮೀಣ | | | | | | | | 1 | 1 |
| ಒಟ್ಟು | 2 | 1 | 1 | 1 | 0 | 0 | 0 | 5 | 10 |

### ಚಿತ್ರದುರ್ಗ ವಿಭಾಗ-13 ಹುದ್ದೆಗಳು

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 1 | 1 | 1 | 1 | | | 2 | 7 |
| ಮಹಿಳೆ | 1 | | | 1 | | | | 2 | 4 |
| ಗ್ರಾಮೀಣ | | | | | | | | 2 | 2 |
| ಒಟ್ಟು | 2 | 1 | 1 | 2 | 1 | 0 | 0 | 6 | 13 |

ಈ ಮೇಲಿನ ವಿಭಾಗವಾರು ರೋಸ್ಟರ್‌ನ್ನು ಕ್ರೋಢೀಕರಿಸಿ ಈ ಕೆಳಗಿನಂತೆ ಮೀಸಲಾತಿವಾರು ಆಯ್ಕೆಗೊಳಿಸಲಾಗುವುದು.

### <u>ಕ್ರೋಢೀಕೃತ ಪಟ್ಟಿ</u>

| | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 11 | 3 | 3 | 12 | 2 | 2 | 2 | 22 | 57 |
| ಮಹಿಳೆ | 9 | 6 | 5 | 9 | 5 | 3 | 5 | 35 | 77 |
| ಗ್ರಾಮೀಣ | 8 | 0 | 2 | 10 | 1 | 0 | 1 | 23 | 45 |
| ಮಾ.ಸೈ. | 1 | 0 | 0 | 1 | 0 | 0 | 0 | 8 | 10 |
| ಕ.ಮೂ. | 0 | 0 | 0 | 0 | 0 | 0 | 0 | 6 | 6 |
| ಯೋ.ನಿ | 0 | 0 | 0 | 0 | 0 | 0 | 0 | 5 | 5 |
| ಒಟ್ಟು | 29 | 9 | 10 | 32 | 8 | 5 | 8 | 99 | 200 |

(ಮೇಲ್ಕಂಡ ಹುದ್ದೆಗಳ ವರ್ಗೀಕರಣವು ತಾತ್ಕಾಲಿಕವಾಗಿದ್ದು, ಅವಶ್ಯಕತೆ ಅನುಗುಣವಾಗಿ ಮಾರ್ಪಡಿಸಬಹುದಾಗಿದೆ. ಆಯ್ಕೆ ಹೊಂದಿದ ಅಭ್ಯರ್ಥಿಗಳನ್ನು ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿ ಬರುವ ರಾಮನಗರ, ತುಮಕೂರು, ಮಂಡ್ಯ, ಚಾಮರಾಜನಗರ, ಮೈಸೂರು ನಗರ ಸಾರಿಗೆ, ಮೈಸೂರು ಗ್ರಾಮಾಂತರ, ಮಂಗಳೂರು, ಪುತ್ತೂರು, ಚಿಕ್ಕಮಗಳೂರು, ಕೆಂಪೇಗೌಡ ವಾಹನ ನಿಲ್ದಾಣ, ಶಿವಮೊಗ್ಗ, ಚಿತ್ರದುರ್ಗ ವಿಭಾಗಗಳಲ್ಲಿ ಆಯಾ ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಯಾವುದೇ ಕಚೇರಿ/ ಘಟಕಗಳಿಗೆ ವಿಭಾಗವಾರು ಮೀಸಲಾತಿ ವರ್ಗೀಕರಣದನುಸಾರ ನಿಯೋಜಿಸಬಹುದಾಗಿರುತ್ತದೆ. <u>ಆಯ್ಕೆಯಾದ ಅಭ್ಯರ್ಥಿಗಳು ಕ.ರಾ.ರ.ಸಾ.ನಿಗಮದಿಂದ ಇತರೆ ಸಂಸ್ಥೆಗಳಾದ ವಾ.ಕ.ರ.ಸಾ.ಸಂಸ್ಥೆ, ಬೆಂ.ಮ.ಸಾ.ಸಂಸ್ಥೆ ಮತ್ತು ಈ.ಕ.ರ.ಸಾ.ಸಂಸ್ಥೆಗಳಿಗೆ ವರ್ಗಾವಣೆ ಹೊಂದಲು ಅವಕಾಶವಿರುವುದಿಲ್ಲ.)</u>

**<u>I. ಅರ್ಹತೆಗಳು</u> (ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ : 16-7-2018 ಕ್ಕೆ)**

**1. <u>ವಿದ್ಯಾರ್ಹತೆ</u>**

<u>ಭದ್ರತಾ ರಕ್ಷಕ, ದರ್ಜೆ-3:</u>

ಅ)ಪಿ.ಯು.ಸಿ ಉತ್ತೀರ್ಣರಾಗಿರಬೇಕು ಅಥವಾ ದ್ವಿತೀಯ ದರ್ಜೆಯ ಸೇನಾ ಪ್ರಮಾಣ ಪತ್ರ ಅಥವಾ ನೌಕಾಪಡೆ / ವಾಯು ಪಡೆಯಲ್ಲಿ ತತ್ಸಮಾನ ದರ್ಜೆ ಪ್ರಮಾಣ ಪತ್ರ ಹೊಂದಿದ್ದ ಮಾಜಿ ಸೈನಿಕನಾಗಿರಬೇಕು.

a) Must have passed PUC Or Must be an Ex-service personnel with Second class Army Certificate Or equivalent grade in Navy /Airforce

**2. ವಯೋಮಿತಿ**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 16-7-2018 ಕ್ಕೆ.

i) ಕನಿಷ್ಠ 18 ವರ್ಷಗಳು ಪೂರ್ಣಗೊಂಡಿರಬೇಕು.

ii) ಗರಿಷ್ಠ ಈ ಕೆಳಕಂಡ ಗರಿಷ್ಠ ವಯೋಮಿತಿಯೊಳಗಿರಬೇಕು.

| ವರ್ಗ | ವಯೋಮಿತಿ |
|---|---|
| ಸಾಮಾನ್ಯ ವರ್ಗ | 35ವರ್ಷಗಳು |
| 2ಎ/2ಬಿ/3ಎ/3ಬಿ | 38 ವರ್ಷಗಳು |
| ಪ.ಜಾತಿ/ಪ.ಪಂ/ ವರ್ಗ-1 | 40 ವರ್ಷಗಳು |

iii) ಇಲಾಖಾ ಅಭ್ಯರ್ಥಿಗಳು ಅವರು ಸಲ್ಲಿಸಿರುವ ಸೇವಾವಧಿಯ ಗರಿಷ್ಠ 10 ವರ್ಷಗಳಗೆ ಮೀರದಂತೆ ವಯೋಮಿತಿ ರಿಯಾಯಿತಿಗೆ ಅರ್ಹರು ಮತ್ತು ರಿಯಾಯಿತಿಗೆ ಅವರ ವಯಸ್ಸು 45 ವರ್ಷ ಮೀರಿರಬಾರದು. (Should be below 45 years of age)

iv) ಮಾಜಿ ಸೈನಿಕರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪರಿಭಾಷೆಯನ್ನು ಹೊಂದಿರತಕ್ಕದ್ದು:

"EX-SERVICEMEN" means a person, who has served in any rank (whether as a combatant or as a non-combatant) in the regular Army, Navy and Air Forces of the Union but does not include a person who has served in the Defence Security Corps, the General Reserve Engineering Force, the Lok Sahayak Sene and Para Military Forces and

a) Who has retired from such services earning his pension, or
b) Who has been released from such service on Medical Grounds attributable to military service or circumstances beyond his control and awarded medical or other disability pensions, or
c) Who has been released otherwise than on his own request from such service as a result of reduction in Establishment, or
d) Who has been released from such service after completing the specific period of engagement otherwise than at his own request or by way of dismissal or discharge on account of mis-conduct or in-efficiency and has been given a gratuity and includes personnel of the Territorial Army of the following categories, namely:

(i) Pension holders for continuous embodied service
(ii) Pension with disability attributable to military service; and
(iii) Gallantry award winners

In respect of Ex-Servicemen, by three years plus by the number of years of service rendered by him in Armed Forces of the Union subject to the condition the Ex-servicemen shall not have completed 45 years of age.

3. **ದೇಹದಾರ್ಢ್ಯತೆ :**

ಮೇಲ್ಕಂಡ ಹುದ್ದೆಗಳಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆಯನ್ನು ಕಡ್ಡಾಯವಾಗಿ ಹೊಂದಿರಬೇಕು.

| | ಪುರುಷರು | ಮಹಿಳೆಯರು |
|---|---|---|
| ಎತ್ತರ | 163 ಸೆಂ.ಮೀ | 153 ಸೆಂ.ಮೀ |
| ತೂಕ | 55 ಕೇ.ಜಿ | 50 ಕೇ.ಜಿ |

## II. ಮೀಸಲಾತಿಗಳು

1. ಪ್ರವರ್ಗ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರದ ಅಧಿಸೂಚನೆ ಸಂಖ್ಯೆ:ಎಸ್‌ಡಬ್ಲ್ಯೂಡಿ 225 ಎಸ್‌ಬಿಸಿ 2002 ದಿನಾಂಕ: 11-03-2002 ರನ್ವಯ ದಿನಾಂಕ: 11-03-2002ರ ನಂತರ ಮತ್ತು 5 ವರ್ಷದೊಳಗೆ ಹಾಗೂ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರುವ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಮೂನೆ-"ಎಫ್"ನ್ನು ಹೊಂದಿದ್ದಲ್ಲಿ ಮಾತ್ರ 2ಎ, 2ಬಿ, 3ಎ, 3ಬಿ ಗುಂಪಿನ ಮೀಸಲಾತಿ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

2. ಪ.ಜಾ/ಪ.ಪಂ ಮತ್ತು ವರ್ಗ-1 ಮೀಸಲಾತಿ :

ಎ) ಪಜಾ/ಪಪಂ ಮೀಸಲಾತಿ ಸೌಲಭ್ಯ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರ ನಮೂನೆ-"ಡಿ"ಯನ್ನು ಹೊಂದಿರತಕ್ಕದ್ದು. ಪರಿವಾರ, ತಳವಾರ, ಮಾಲೇರು, ಕುರುಬ, ಬೆಸ್ತ ಮತ್ತು ಕೋಳಿ ಜಾತಿಗೆ ಸೇರಿದ ಅಭ್ಯರ್ಥಿಗಳು ಪರಿಶಿಷ್ಟ ಪಂಗಡದ ನಾಯಕ, ಮಾಲೇರು, ಕಾಡುಕುರುಬ, ಜೇನುಕುರುಬ, ಗೊಂಡ, ರಾಜಗೊಂಡ, ಕೋಳಿಧೋರ ಮತ್ತು ಟೋಕ್ರಕೋಳಿ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅವುಗಳು ಸರ್ಕಾರಿ ಆದೇಶ ಸಂ: ಎಸ್‌ಡಬ್ಲ್ಯೂಡಿ/713/ಎಸ್‌ಎಡಿ/93 ದಿನಾಂಕ 11-03-2002 ರನ್ವಯ ಅಸಿಂಧು ಆಗುತ್ತದೆ. ಆದುದರಿಂದ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ದಿನಾಂಕ 11-03-2002 ರ ನಂತರ ಪಡೆದ ತಮ್ಮ ಜಾತಿ ಮತ್ತು ಉಪಜಾತಿಯನ್ನು ಸ್ಪಷ್ಟವಾಗಿ ನಮೂದಿಸಿರುವ ಸಮರ್ಪಕವಾದ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು.

ಬಿ) ವರ್ಗ-1 ಮೀಸಲಾತಿ ಸೌಲಭ್ಯ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರ ನಮೂನೆ 'ಇ' ಯನ್ನು ಹೊಂದಿರತಕ್ಕದ್ದು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು. (ವಿದ್ಯಾಭ್ಯಾಸಕ್ಕಾಗಿ/ಶಿಕ್ಷಣಕ್ಕಾಗಿ/ಸರ್ಕಾರಿ ಸೌಲಭ್ಯಕ್ಕಾಗಿ ಅಥವಾ ಸಾಲಕ್ಕಾಗಿ ಪಡೆದಿರುವ ಜಾತಿ/ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ).

3. ಗ್ರಾಮೀಣ ಮೀಸಲಾತಿ: ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 96 ಸಸೇನಿ 2005 ದಿನಾಂಕ: 10/08/2005 ರಲ್ಲಿ ತಿಳಿಸಿರುವಂತೆ 1ನೇ ತರಗತಿಯಿಂದ 10ನೇ ತರಗತಿವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದ ಪ್ರಮಾಣ ಪತ್ರದ ಮೇಲೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿದ ಪ್ರಮಾಣಪತ್ರ ಹಾಗೂ ಅವಶ್ಯಕವಿರುವ ಕಡೆ ಸಂಬಂಧಪಟ್ಟ ತಹಶೀಲ್ದಾರರವರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ದೃಢೀಕರಣ ಪತ್ರವನ್ನು ಹೊಂದಿರುವ ಅಭ್ಯರ್ಥಿಗಳು ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಿರುತ್ತಾರೆ. ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಸೌಲಭ್ಯ ಕೋರಿದಲ್ಲಿ ಮೇಲೆ ತಿಳಿಸಿರುವಂತೆ ಪ್ರಮಾಣ ಪತ್ರ ಸಲ್ಲಿಸುವುದರ ಜೊತೆಗೆ ನಿಗದಿತ ನಮೂನೆ-1 ರಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಂದ ಅವರು ಕ್ರೀಮಿಲೇಯರ್ (ಮೇಲುಸ್ತರ) ಪರಿಮಿತಿಯಲ್ಲಿ ಬರುವುದಿಲ್ಲವೆಂದು ದೃಢೀಕರಿಸಿದ ಪ್ರಮಾಣ ಪತ್ರ ಹೊಂದಿರಬೇಕು.

4. ಯೋಜನಾ ನಿರಾಶ್ರಿತ ಮೀಸಲಾತಿ: ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಆರ್‌ಆರ್ 99 ದಿನಾಂಕ: 23-11-2000 ರಲ್ಲಿ ತಿಳಿಸಿರುವಂತೆ ಯೋಜನೆಗಳ ನಿರಾಶ್ರಿತರ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ಪಡೆದ ಪ್ರಮಾಣ ಪತ್ರವನ್ನು ಹೊಂದಿದ್ದಲ್ಲಿ ಮಾತ್ರ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹರಾಗುತ್ತಾರೆ. ಆದರೆ ಸದರಿ ಸರ್ಕಾರದ ಆದೇಶದನುಸಾರ ಈ ನಿಯಮ ಜಾರಿಗೆ ಬಂದ ದಿನಾಂಕದಿಂದ ಹಿಂದಕ್ಕೆ 20 ವರ್ಷಗಳ ಪೂರ್ವದಲ್ಲಿ ಅಥವಾ 20 ವರ್ಷಗಳ ಹಿಂದೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಂತಹ ಪ್ರಕರಣಗಳ ಅಭ್ಯರ್ಥಿಗಳು ಈ ಮೀಸಲಾತಿ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

5. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಮೀಸಲಾತಿ ಕುರಿತಂತೆ ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ / 71/ ಎಸ್‌ಆರ್‌ಆರ್ / 2001/ ಬೆಂಗಳೂರು, ದಿನಾಂಕ : 24-10-2002 ರಲ್ಲಿ ತಿಳಿಸಿರುವಂತೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ಪಡೆದ

ನಿಗದಿತ ಪ್ರಮಾಣ ಪತ್ರ ಅಧಿಕೃತ ಮೊಹರು ಹೊಂದಿದ ಪ್ರಮಾಣ ಪತ್ರ ಹೊಂದಿರುವವರು ಮಾತ್ರ ಕನ್ನಡ ಮಾಧ್ಯಮ ಮೀಸಲಾತಿಗೆ ಅರ್ಹರಿರುತ್ತಾರೆ.

**6. ಮಾಜಿ ಸೈನಿಕ ಮೀಸಲಾತಿ:** ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಕನಿಷ್ಠ 15 ವರ್ಷಗಳ ಸೇವೆ ಸಲ್ಲಿಸಿರುವ ಬಗ್ಗೆ ನಿಗದಿತ ಡಿಸ್‌ಚಾರ್ಜ್ ಪ್ರಮಾಣ ಪತ್ರ ಹೊಂದಿರಬೇಕು.

**ಸಾರಿಗೆ ಸಂಸ್ಥೆಯ ಇಲಾಖಾ ಅಭ್ಯರ್ಥಿಗಳಿಗಾಗಿ :** ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಇಲಾಖಾ ಅಭ್ಯರ್ಥಿಗಳು ವಯೋಮಿತಿ ವಿನಾಯಿತಿಯನ್ನು ಹೊರತುಪಡಿಸಿ ಉಳಿದೆಲ್ಲಾ ಷರತ್ತುಗಳ ವಿಷಯದಲ್ಲಿ ಇತರೆ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಬೇಕಿರುತ್ತದೆ.

## III. ನಿಗಧಿತ ಶುಲ್ಕ

1. **ಶುಲ್ಕದ ವಿವರ :**

| ವರ್ಗ | ಶುಲ್ಕ (ಪ್ರತಿ ಹುದ್ದೆಗೆ) |
|---|---|
| ಸಾಮಾನ್ಯ, 2ಎ, 2ಬಿ, 3ಎ ಮತ್ತು 3ಬಿ ವರ್ಗ | 800/- |
| ಪ.ಜಾತಿ, ಪ.ಪಂಗಡ, ವರ್ಗ-1, ಮಾಜಿ ಸೈನಿಕ ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | 600/- |

2. **ಶುಲ್ಕ ಪಾವತಿ ಮಾಡುವ ರೀತಿ :**

ಅ. www.ksrtcjobs.com ನಲ್ಲಿ ON LINE ಮೂಲಕ ಅರ್ಜಿ ಸಲ್ಲಿಸಿದ ಕೂಡಲೆ ಅಭ್ಯರ್ಥಿಗಳು ನಂತರ ಚಲನ್ ಪ್ರತಿಯನ್ನು ಡೌನ್‌ಲೋಡ್ ಮಾಡಿ ಅರ್ಜಿ ಶುಲ್ಕವನ್ನು ಅಂಚೆ ಕಚೇರಿಯ ಕೆಲಸದ ವೇಳೆಯೊಳಗೆ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಚೇರಿಯಲ್ಲಿ (Computerised Post Offices only) ಮಾತ್ರ ಇ-ಪೇಮೆಂಟ್ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಲು ಅವಕಾಶ ಕಲ್ಪಿಸಿದ್ದು, ಅರ್ಜಿ ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಬೇರೆ ಯಾವುದೇ ರೀತಿ ಅರ್ಜಿ ಶುಲ್ಕ ಪಾವತಿಸಿದ್ದಲ್ಲಿ ಸದರಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

ಆ. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವ ಅದನ್ನು ಸಂಸ್ಥೆಯು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ವಿಶೇಷ ಸೂಚನೆ : ಅರ್ಜಿ ಶುಲ್ಕವನ್ನು ಪಾವತಿಸದಿರುವುದು ಅಥವಾ ಕಡಿಮೆ ಮೊತ್ತದ ಅರ್ಜಿ ಶುಲ್ಕವನ್ನು ಪಾವತಿಸಿರುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದರೂ ಸಹ ಅಂತಹ ಅಭ್ಯರ್ಥಿಗಳ ಅಭ್ಯರ್ಥತನವನ್ನು ತಿರಸ್ಕರಿಸಲಾಗುವುದು**

## IV. ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ

ಅ. ಅರ್ಜಿಯನ್ನು ಕಡ್ಡಾಯವಾಗಿ ಆನ್-ಲೈನ್ ಮುಖಾಂತರವೇ ಕ ರಾ ರ ಸಾ ನಿಗಮದ ವೆಬ್-ಸೈಟ್ www.ksrtcjobs.com ಮೂಲಕ ಸಲ್ಲಿಸಬೇಕು.

ಆ. ದಿನಾಂಕ 20-6-2018 ರಿಂದ 16-7-2018 ರವರಗೆ ವೆಬ್-ಸೈಟ್ ತೆರೆದಿರುತ್ತದೆ. ಅರ್ಜಿಗಳನ್ನು ಕೊನೆಯ ದಿನಾಂಕವಾದ 16-7-2018 ರ ಸಂಜೆ 5:00 ಗಂಟೆಯೊಳಗೆ ಆನ್ ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಇ. ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 18-7-2018 ರ ಸಂಜೆ 5.00 ಗಂಟೆಯೊಳಗೆ.

ಈ ಅಭ್ಯರ್ಥಿಗಳು ಕೇವಲ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಬಹುದಾಗಿದ್ದು ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ.

ಆದ್ದರಿಂದ ಅಭ್ಯರ್ಥಿಗಳು ಸೂಚನೆಗಳನ್ನು ಓದಿ ಅರ್ಥಮಾಡಿಕೊಂಡ ನಂತರ ಅರ್ಜಿಯನ್ನು ತುಂಬಿ ಸಲ್ಲಿಸತಕ್ಕದ್ದು.

ಉ ಅಭ್ಯರ್ಥಿಗಳು ಸೂಚನೆಗಳನ್ನು ಓದಿ ಅರ್ಥಮಾಡಿಕೊಂಡ ನಂತರ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಭಾವಚಿತ್ರ ಹಾಗೂ ಸಹಿಯನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿ ಸಲ್ಲಿಸತಕ್ಕದ್ದು. ಅಪ್‌ಲೋಡ್ ಮಾಡಿ ಸಲ್ಲಿಸಿದ ಮುದ್ರಿತ ಅರ್ಜಿ ಹಾಗೂ ಅರ್ಜಿ ಶುಲ್ಕ ಪಾವತಿಯ ಅಂಚೆ ಕಚೇರಿ ಚಲನ್ ಪ್ರತಿಗಳನ್ನು ಅಭ್ಯರ್ಥಿಗಳು ತಮ್ಮ ಬಳಿ ಇಟ್ಟುಕೊಂಡು ದೈಹಿಕ ಸಾಮಾರ್ಥ್ಯ ಪರೀಕ್ಷೆ, ONLINE/ OMR CAT ಪರೀಕ್ಷೆ ಹಾಗೂ ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರಿಪಡಿಸುವುದು.

## V) ಆಯ್ಕೆ ವಿಧಾನ

ಅಭ್ಯರ್ಥಿಗಳ ಆಯ್ಕೆ ವಿಧಾನವನ್ನು ಮೂರು ಹಂತಗಳಲ್ಲಿ ವಿಂಗಡಿಸಿದ್ದು, ಪ್ರತಿ ಹಂತದಲ್ಲಿ ಉತ್ತೀರ್ಣರಾದಲ್ಲಿ/ಅರ್ಹಗೊಂಡಲ್ಲಿ ಮಾತ್ರ ಮುಂದಿನ ಹಂತಕ್ಕೆ ಅರ್ಹರಾಗುತ್ತಾರೆ.

### ಅ) ಮೊದಲನೇ ಹಂತ

ದೇಹದಾರ್ಢ್ಯತೆ ಪರಿಶೀಲನೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆ

ಅಭ್ಯರ್ಥಿಗಳಿಗೆ ಮೊದಲಿಗೆ ನಿಗದಿತ ದೇಹದಾರ್ಢ್ಯತೆ (ಎತ್ತರ ಮತ್ತು ತೂಕ) ಪರಿಶೀಲನೆಗೆ ಒಳಪಡಿಸಲಾಗುವುದು. ಅದರಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ಈ ಕೆಳಕಂಡ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಒಳಪಡಿಸಲಾಗುವುದು. (ಸದರಿ ಪರೀಕ್ಷೆಯನ್ನು ಬೆಂಗಳೂರು ಕೇಂದ್ರದಲ್ಲಿ ಮಾತ್ರ ಮಾಡಲಾಗುವುದು. ಅರ್ಜಿ ಸಲ್ಲಿಸುವ ಎಲ್ಲಾ ಅಭ್ಯರ್ಥಿಗಳಿಗೆ ಸದರಿ ಪರೀಕ್ಷೆಗೆ ಒಳಪಡಿಸಲಾಗುವುದು)

**ಪುರುಷ ಅಭ್ಯರ್ಥಿಗಳಿಗೆ:**

| ಕ್ರ.ಸಂ | ಸ್ಪರ್ಧೆ | ಅರ್ಹ ಪರಿಮಾಣ |
|---|---|---|
| 1 | 400 ಮೀಟರ್ ಓಟ | 80 ಸೆಕೆಂಡುಗಳ ಒಳಗಾಗಿ |
| 2 | ಉದ್ದ ಜಿಗಿತ | 3.50 ಮೀಟರ್ ಗಳಿಗೆ ಕಡಿಮೆ ಇಲ್ಲದಂತೆ |
| 3 | ಗುಂಡು ಎಸೆತ: 7.26 ಕೆ.ಜಿ ತೂಕ | 5 ಮೀಟರ್‌ಗಳಿಗೆ ಕಡಿಮೆ ಇಲ್ಲದಂತೆ |

ಸೂಚನೆ: ಮೇಲ್ಕಂಡ ಯಾವುದೇ ಒಂದು ಪರೀಕ್ಷೆಯಲ್ಲಿ ಅನರ್ಹಗೊಂಡಲ್ಲಿ ಮುಂದಿನ ಪರೀಕ್ಷೆಗೆ ಅರ್ಹರಿರುವುದಿಲ್ಲ.

**ಮಹಿಳಾ ಅಭ್ಯರ್ಥಿಗಳಿಗೆ:**

| ಕ್ರ.ಸಂ | ಸ್ಪರ್ಧೆ | ಅರ್ಹ ಪರಿಮಾಣ |
|---|---|---|
| 1 | 200 ಮೀಟರ್ ಓಟ | 42 ಸೆಕೆಂಡುಗಳ ಒಳಗಾಗಿ |
| 2 | ಉದ್ದ ಜಿಗಿತ | 3.00 ಮೀಟರ್‌ಗಳಿಗೆ ಕಡಿಮೆ ಇಲ್ಲದಂತೆ |
| 3 | ಗುಂಡು ಎಸೆತ: 4 ಕೆ.ಜಿ ತೂಕ | 4.5 ಮೀಟರ್‌ಗಳಿಗೆ ಕಡಿಮೆ ಇಲ್ಲದಂತೆ |

ಸೂಚನೆ: ಮೇಲ್ಕಂಡ ಯಾವುದೇ ಒಂದು ಪರೀಕ್ಷೆಯಲ್ಲಿ ಅನರ್ಹಗೊಂಡಲ್ಲಿ ಮುಂದಿನ ಪರೀಕ್ಷೆಗೆ ಅರ್ಹರಿರುವುದಿಲ್ಲ.

### ಆ) ಎರಡನೇ ಹಂತ

ಆನ್-ಲೈನ್/ಓ.ಎಂ.ಆರ್ (Online /OMR based Written Test) ಮೂಲಕ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ (CAT)

ಮೊದಲನೆ ಹಂತದಲ್ಲಿ ಉತ್ತೀರ್ಣರಾದ/ಅರ್ಹಗೊಂಡ ಅಭ್ಯರ್ಥಿಗಳನ್ನು ಸಂಸ್ಥೆಯು ನಡೆಸುವ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಒಳಪಡಿಸಲಾಗುವುದು. ಸದರಿ ಪರೀಕ್ಷೆಯಲ್ಲಿ ಕನಿಷ್ಠ 30 ಅಂಕಗಳನ್ನು ಪಡೆದಲ್ಲಿ ಮಾತ್ರ ಮುಂದಿನ ಆಯ್ಕೆ ಪ್ರಕ್ರಿಯೆಗೆ ಅರ್ಹರಿದ್ದು, ಹುದ್ದೆಗೆ ನಿಗಧಿತ ಶೈಕ್ಷಣಿಕ ವಿದ್ಯಾರ್ಹತೆಯ ಶೇಕಡ 25 ಮತ್ತು ಆನ್-ಲೈನ್/ ಓ.ಎಂ.ಆರ್ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡ 75 ರನ್ನು ಕ್ರೋಢೀಕರಿಸಿ ಮೆರಿಟ್ ಮತ್ತು ಮೀಸಲಾತಿಯನುಸಾರ ಆಯ್ಕೆ ಮಾಡಲಾಗುವುದು.

- ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ಬೆಂಗಳೂರು / ದಾವಣಗೆರೆ / ಹಾಸನ / ಮೈಸೂರು / ಮಂಗಳೂರು ಕೇಂದ್ರಗಳಲ್ಲಿ ನಡೆಸಲಾಗುವುದು.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಮಯದಲ್ಲಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ಕೇಂದ್ರವನ್ನು ಆಯ್ಕೆಮಾಡಿಕೊಳ್ಳಬೇಕಾಗುತ್ತದೆ. ಅಭ್ಯರ್ಥಿಯು ಒಮ್ಮೆ ಆಯ್ಕೆಮಾಡಿಕೊಂಡ ಸಾಮಾನ್ಯ ಸಾಮರ್ಥ್ಯ ಪರೀಕ್ಷಾ ಕೇಂದ್ರವನ್ನು ನಂತರ ಯಾವುದೇ ಕಾರಣಕ್ಕು ಬದಲಾಯಿಸಲಾಗುವುದಿಲ್ಲ.
- ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ಬರೆಯಲು ಆಯ್ಕೆ ಮಾಡಿಕೊಂಡ ಪರೀಕ್ಷಾ ಕೇಂದ್ರದಲ್ಲಿ ಅನಿವಾರ್ಯ ಕಾರಣಗಳಿಂದ ಪರೀಕ್ಷೆಯನ್ನು ನಡೆಸಲು ಸಾಧ್ಯವಾಗದಿದ್ದಲ್ಲಿ ಸಂಸ್ಥೆಯು ಸೂಚಿಸುವ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ಬರೆಯಬೇಕಾಗುತ್ತದೆ.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಆಯ್ಕೆಯ ಸಂದರ್ಭದಲ್ಲಿ ಅವರು ಹುದ್ದೆಗೆ ಅರ್ಜಿಯಲ್ಲಿ ಹುದ್ದೆವಾರು ಹೊಂದಿರುವ ಮೆರಿಟ್ ಮತ್ತು ಮೀಸಲಾತಿಯ ಅನುಸಾರ ಆಯ್ಕೆಗೆ ಪರಿಗಣಿಸಲಾಗುವುದು.

<u>ಇ) ಮೂರನೇ ಹಂತ</u>

<u>ಮೂಲ ದಾಖಲಾತಿಗಳ ಪರಿಶೀಲನೆ</u>

ಮೊದಲನೆ ಹಾಗೂ ಎರಡನೇ ಹಂತಗಳಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ಜಾಹೀರಾತುಗೊಳಿಸಲಾದ ಹುದ್ದೆಗಳು ಅನುಸಾರ ಆಯ್ಕೆ ಸಮಿತಿಯು ನಿಗಧಿಪಡಿಸುವ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮೂಲ ದಾಖಲಾತಿ ಪರಿಶೀಲನೆಗಾಗಿ ಆಹ್ವಾನಿಸಲಾಗುವುದು. (ಆಯ್ಕೆ ಪ್ರಾಧಿಕಾರದಿಂದ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ).

**VI.** ಸಂಸ್ಥೆಯ ವೆಬ್‌ಸೈಟ್ www.ksrtcjobs.com ಹಾಗೂ ಪ್ರಮುಖ ದಿನಪತ್ರಿಕೆಗಳಲ್ಲಿ ದೇಹದಾರ್ಢ್ಯತೆ/ ದೈಹಿಕ ಸಾಮರ್ಥ್ಯ ಪರೀಕ್ಷೆ/ ಆನ್-ಲೈನ್/ ಒ.ಎಂ.ಆರ್ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ದಿನಾಂಕ ಮತ್ತು ಕರೆಪತ್ರ ಮುದ್ರಿಸಿಕೊಳ್ಳುವ ಕುರಿತು ವಿವರಗಳನ್ನು ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಕರೆಪತ್ರವನ್ನು ವೆಬ್‌ಸೈಟ್‌ನಿಂದ ಮುದ್ರಿಸಿಕೊಂಡು ಇದರಲ್ಲಿ ತಿಳಿಸಲಾಗುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ನಿಗದಿತ ದಿನಾಂಕ ಹಾಗೂ ಸಮಯದಂದು ಸದರಿ ಪರೀಕ್ಷೆಗಳಿಗೆ ಹಾಜರಾಗತಕ್ಕದ್ದು.

ಅಭ್ಯರ್ಥಿಗಳಿಗೆ ದೇಹದಾರ್ಢ್ಯತೆ/ ದೈಹಿಕ ಸಾಮರ್ಥ್ಯ ಪರೀಕ್ಷೆ/ ಆನ್-ಲೈನ್/ಒ.ಎಂ.ಆರ್ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ಕುರಿತು ಅಂಚೆ ಮೂಲಕ ಪ್ರತ್ಯೇಕ ಕರೆಪತ್ರಗಳನ್ನು ಕಳುಹಿಸಲಾಗುವುದಿಲ್ಲ.

<u>ಕನ್ನಡ ಭಾಷಾಜ್ಞಾನ:</u> ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ವ್ಯಾಸಂಗ ಮಾಡದಿದ್ದಲ್ಲಿ ಸಂಸ್ಥೆಯಲ್ಲಿ ಜಾರಿಯಲ್ಲಿರುವ ನಿಯಮಾವಳಿಯಂತೆ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು. ಕನ್ನಡ ಭಾಷಾ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪಕ್ಷದಲ್ಲಿ ಅವರು ಆಯ್ಕೆಗೆ ಅರ್ಹತೆಯನ್ನು ಕಳೆದುಕೊಳ್ಳುತ್ತಾರೆ.

ಕರಾರಸಾ ಸಂಸ್ಥೆ (ಹದವೃಂದ ಮತ್ತು ನೇಮಕಾತಿ) ನಿಯಮಾವಳಿ-1982ರ ನಿಯಮ 4 (8) ಯನ್ನು ಈ ಕೆಳಕಂಡಂತೆ ತಿದ್ದುಪಡಿಗೊಳಿಸಲಾಗಿದೆ.

4 (8): ಯಾವುದೇ ವ್ಯಕ್ತಿಯು ಹುದ್ದೆಗೆ ನಿಗಧಿಪಡಿಸುವ ವಿದ್ಯಾರ್ಹತೆಯನ್ನು ಹಾಗೂ ನಿಗಮವು ಕಾಲಕಾಲಕ್ಕೆ ನಿಗಧಿಪಡಿಸುವ ಕನ್ನಡ ಭಾಷಾ ಜ್ಞಾನವನ್ನು ಹೊಂದದೆ ಇದ್ದಲ್ಲಿ ಯಾವುದೇ ಹುದ್ದೆಯ ನೇರ ನೇಮಕಾತಿಗೆ ಅರ್ಹರಾಗುವುದಿಲ್ಲ.

ಆದಾಗ್ಯೂ ಕನ್ನಡ ಭಾಷಾ ಜ್ಞಾನವನ್ನು ಹೊಂದುವ ಷರತ್ತು ಈ ಕೆಳಗಿನವರಿಗೆ ಅನ್ವಯಿಸುವುದಿಲ್ಲ.

1) ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಮಾಜಿ ಸೈನಿಕ ಮತ್ತು ಅವರ ಮಕ್ಕಳು.
2) ಕರ್ನಾಟಕ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೇಂದ್ರ ಸರ್ಕಾರಿ ನೌಕರರ ಮಕ್ಕಳು.
3) ಹೊರ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರು.
4) ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಮಕ್ಕಳು.

## VII. ತರಬೇತಿ ಅವಧಿ, ಭತ್ಯೆ ಹಾಗೂ ಇತರೆ ಭತ್ಯೆಗಳು

ಅ) ಆಯ್ಕೆಗೊಂಡ ಅಭ್ಯರ್ಥಿಗಳನ್ನು ಎರಡು ವರ್ಷಗಳ ಕಾಲ ಕೆಲಸದ ಮೇಲೆ ತರಬೇತಿಗೆ ನಿಯೋಜಿಸಲಾಗುವುದು. ತರಬೇತಿಯ ಅವಧಿಯಲ್ಲಿ, ರೂ.9,100/- ತರಬೇತಿ ಭತ್ಯೆ ಹಾಗೂ ಈ ಕೆಳಗಿನ ಭತ್ಯೆಗಳನ್ನು ಸಹ ನೀಡಲಾಗುವುದು.

1) Repast allowance Rs.15/- per day.
2) Washing allowance Rs.35/- Month.
3) Night Shift allowance Rs.15/- per Night.
4) Special allowance Rs.60/- per month.

ಆ) ವೇತನ ಶ್ರೇಣಿ : ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ಕಾಲ ಕೆಲಸದ ಮೇಲೆ ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ ಅವರನ್ನು ಎರಡು ವರ್ಷಗಳ ಖಾಯಂ ಪೂರ್ವ ಪರೀಕ್ಷಾರ್ಥಿ ಸೇವೆಯಲ್ಲಿ ನೇಮಕಗೊಳಿಸಿ ಈ ಕೆಳಕಾಣಿಸಿದಂತೆ ಕಾಲಿಕ ವೇತನ ಶ್ರೇಣಿಯನ್ನು ನಿಗಧಿಪಡಿಸಲಾಗುವುದು.

| ಹುದ್ದೆಯ ಹೆಸರು | ವೇತನ ಶ್ರೇಣಿ |
|---|---|
| ಭದ್ರತಾ ರಕ್ಷಕ ದರ್ಜೆ-3 | 11640-140-11920-170-12600-250-14100-320-15700 |

**ಒಟ್ಟು ವೇತನ : ಮೂಲ ವೇತನ +ಮನೆ ಬಾಡಿಗೆ ಭತ್ಯೆ+ ತುಟ್ಟಿ ಭತ್ಯೆ + ಇತರೆ ಭತ್ಯೆ ಅಂದಾಜು ಒಟ್ಟು ರೂ.21,000/- (ಬೆಂಗಳೂರಿನಲ್ಲಿದ್ದಂತೆ)**

## VIII ದಾಖಲಾತಿಗಳ ವಿವರ

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಅರ್ಹತೆ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಈ ಕೆಳಕಂಡ ಮೂಲ ದಾಖಲಾತಿಗಳ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕವಾದ 16-7-2018 ರಂದಿಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಅವುಗಳನ್ನು ಹಾಜರುಪಡಿಸಲು ಸೂಚಿಸಿದಾಗ ತಪ್ಪದೆ ಹಾಜರು ಪಡಿಸತಕ್ಕದ್ದು.

1. ಅರ್ಜಿ ಶುಲ್ಕ ಪಾವತಿ ಮಾಡಿರುವ ಬಗ್ಗೆ ಅಂಚೆ ಕಚೇರಿಯಿಂದ ನೀಡುವ ಚಲನ್‌ನ ಮೂಲ ಪ್ರತಿ.
2. ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು.
3. ಜನ್ಮ ದಿನಾಂಕದ ದಾಖಲೆಗಾಗಿ ಜನ್ಮ ದಿನಾಂಕವುಳ್ಳ ಎಸ್ ಎಸ್ ಎಲ್ ಸಿ ಅಂಕಪಟ್ಟಿ /ಶಾಲಾ ವರ್ಗಾವಣಾ ಪತ್ರ/ಕ್ಯುಮಿಲೇಟೀವ್ ರೆಕಾರ್ಡ್.
4. ಸೈನಿಕ ಸೇವೆಯಿಂದ ಬಿಡುಗಡೆಯಾಗಿ / ಮುಕ್ತಿ ಹೊಂದಿ ಮಾಜಿ ಸೈನಿಕ ಎಂಬುದಾಗಿ ನಿರ್ಧರಿಸಿರುವ ಬಗ್ಗೆ ಪ್ರಮಾಣಪತ್ರ.(ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).
5. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, ಹಾಗೂ 3ಬಿ ವರ್ಗಗಳ ಮೀಸಲಾತಿಯ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳು. (ಜಾತಿ/ವರ್ಗಗಳ ಮೀಸಲಾತಿ ಕೋರಿದ್ದಲ್ಲಿ).
6. ನಮೂನೆ-1 ಮತ್ತು ನಮೂನೆ-2 ರಲ್ಲಿ ಪಡೆದ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ ಪ್ರತಿಗಳು(ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ).
7. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರ. (ಕನ್ನಡ ಮಾಧ್ಯಮ ಮೀಸಲಾತಿ ಕೋರಿದ್ದಲ್ಲಿ).
8. ಯೋಜನಾ ನಿರಾಶ್ರಿತ ಮೀಸಲಾತಿಗಾಗಿ ಅಧಿಕೃತ ಪ್ರಾಧಿಕಾರಸ್ಥರಿಂದ ಪಡೆದ ಸಮರ್ಪಕವಾದ ಪ್ರಮಾಣ ಪತ್ರ ಹೊಂದಿರಬೇಕು.
9. ಇಲಾಖಾ ಅಭ್ಯರ್ಥಿಗಳು ಸಂಬಂದಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಪಡೆದ ಸೇವಾ ಪ್ರಮಾಣ ಪತ್ರ (ಇಲಾಖಾ ಅಭ್ಯರ್ಥಿಯಾಗಿದ್ದಲ್ಲಿ).
10. ಅಶಕ್ತ ಮಾಜಿ ಸೈನಿಕರ ಅವಲಂಬಿತರೆಂದು ಅರ್ಜಿ ಶುಲ್ಕದಲ್ಲಿ ರಿಯಾಯತಿ ಪಡೆದಿದ್ದಲ್ಲಿ ಈ ಬಗ್ಗೆ ಪ್ರಮಾಣ ಪತ್ರ.

## IX ಸೂಚನೆಗಳು

- ಒಬ್ಬ ಅಭ್ಯರ್ಥಿಯು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.
- ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ವಿದ್ಯಾರ್ಹತೆಗೆ ಯಾವುದೇ ಆದ್ಯತೆ ನೀಡಲಾಗುವುದಿಲ್ಲ.
- ಭಾರತೀಯರಲ್ಲದ ಅಭ್ಯರ್ಥಿ / ಕಾನೂನು ಬಾಹಿರವಾಗಿ ಒಂದಕ್ಕಿಂತ ಹೆಚ್ಚು ಜೀವಂತ ಪತಿ/ಪತ್ನಿ ಹೊಂದಿರುವ ಅಭ್ಯರ್ಥಿ ಹಾಗೂ ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವ ಈ ಸಂಸ್ಥೆಯಲ್ಲಿ ಅಥವ ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ/ಕೈಗಾರಿಕಾ/ವಾಣಿಜ್ಯಕ್ಕೆ ಸಂಬಂದಪಟ್ಟ ಅಥವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಕಾರಣಕ್ಕಾಗಿ ಅಥವ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ / ತರಬೇತಿದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ವಜಾ ಮಾಡಿದ್ದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.
- ಅರ್ಜಿಯಲ್ಲಿ ಸುಳ್ಳು ಮಾಹಿತಿ ನೀಡಿ ಅಥವ ನಕಲಿ ಪ್ರಮಾಣಪತ್ರ/ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು, ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಯಾವುದೇ ಸಮಯದಲ್ಲಾದರೂ ನೌಕರಿಯಿಂದ ವಜಾ ಮಾಡಲಾಗುವುದು ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.
- ಅಭ್ಯರ್ಥಿಯು ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
- ಹುದ್ದೆಗೆ ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯ ಪರೀಕ್ಷೆಗೆ ಹಾಜರಾಗಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಫಲಿತಾಂಶ ಪ್ರಕಟವಾಗದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.
- ಅರ್ಹ ಅಭ್ಯರ್ಥಿಗಳು ಆನ್ ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವ ಮೊದಲು ವೆಬ್ ಸೈಟ್‌ನಲ್ಲಿ ನೀಡಿರುವ ವಿವರವಾದ ಜಾಹೀರಾತು/ಸೂಚನೆಗಳನ್ನು/ವಿಧಾನವನ್ನು ತಿಳಿದುಕೊಳ್ಳುವುದು.
- ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಕ ರಾ ರ ಸಾ ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.
- ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972 ರನ್ವಯ ಉಪಧನ ಪಡೆಯಲು ಅರ್ಹರಿರುತ್ತಾರೆ. ಮುಕ್ತ ವೇತನ ಶ್ರೇಣಿಗೆ ಅರ್ಹರಿರುವುದಿಲ್ಲ.
- ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ಅಥವ ಮೇಲ್ದರ್ಜೆ ವಿದ್ಯಾರ್ಹತೆಯಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ನಿಗಮದ ವತಿಯಿಂದ ನಡೆಸಲಾಗುವ ಕನ್ನಡ ಭಾಷಾ ಜ್ಞಾನ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
- ಆಯ್ಕೆ ಹೊಂದಿದ ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವ ಕರ್ನಾಟಕ ಸರ್ಕಾರ ಅಥವ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ಆಕ್ಷೇಪಣೆ ಇಲ್ಲವೆಂಬ ಪತ್ರವನ್ನು ಹುದ್ದೆಗೆ ವರದಿ ಮಾಡಿಕೊಳ್ಳುವಾಗ ಹಾಜರುಪಡಿಸತಕ್ಕದ್ದು.
- ಆಯ್ಕೆಗೆ ಸಂಬಂಧಿಸಿದಂತೆ ಅಭ್ಯರ್ಥಿಯು ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಯಾವ ಮುನ್ಸೂಚನೆ ನೀಡದೆ ಅವರನ್ನು ಆಯ್ಕೆಗೆ ಅನರ್ಹಗೊಳಿಸಲಾಗುವುದು.

- ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ರೀತಿಯ ಪತ್ರ ವ್ಯವಹಾರ ಅಥವ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ. ನೇಮಕಾತಿಯ ವಿವಿಧ ಹಂತಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್ ಸೈಟ್ www.ksrtcjobs.com ನಲ್ಲಿ ನೀಡಲಾಗಿರುತ್ತದೆ.
- ಮೊದಲನೆ ಮತ್ತು ಎರಡನೇ ಹಂತದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮೆರಿಟ್ ಅನುಸಾರ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಮೇಲ್ಕಂಡಂತೆ ಅಧಿಸೂಚಿಸಿರುವಂತೆ ಕ ರಾ ರ ನಿಗಮದ ವ್ಯಾಪ್ತಿಯಡಿ ಬರುವ ಆಯಾ ವಿಭಾಗವಾರು ಖಾಲಿ ಸ್ಥಾನಗಳಿಗೆ ಅನುಗುಣವಾಗಿ ನಿಯೋಜಿಸಲಾಗುವುದು. ಆಯ್ಕೆಗೊಂಡ ಎಲ್ಲಾ ಅಭ್ಯರ್ಥಿಗಳು ಸದರಿ ವಿಷಯದಲ್ಲಿ ಬದ್ಧರಾಗಿರಬೇಕು ಹಾಗೂ ಈ ಬಗ್ಗೆ ಕರಾರಸಾ ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಯಲ್ಲಿ ನೀಡಲಾದ ವಿವರಗಳನ್ನು ಆಧರಿಸಿ ನಿಗಮದ ವೆಬ್ ಸೈಟ್ www.ksrtcjobs.com ನಲ್ಲಿ ನಂತರ ತಿಳಿಸಲಾಗುವ ದಿನಾಂಕಗಳಲ್ಲಿ ಪ್ರವೇಶ ಪತ್ರದ ಧ್ವಿಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ತಿಳಿಸಲಾಗುವ ನಿರ್ದೇಶನಗಳನ್ನು ಪಾಲಿಸುವುದು.
- ಅಭ್ಯರ್ಥಿಯು, ಪರೀಕ್ಷೆಯನ್ನು ಕನ್ನಡ ಅಥವ ಆಂಗ್ಲ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದ್ದು, ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಹಾಗೂ ಪರೀಕ್ಷಾ ಕೇಂದ್ರವನ್ನು ಒಮ್ಮೆ ನಮೂದಿಸಿದ ನಂತರ ಅದೇ ಅಂತಿಮವಾಗಿದ್ದು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ. ಆದುದರಿಂದ ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಮತ್ತು ಪರೀಕ್ಷಾ ಕೇಂದ್ರವನ್ನು ಸ್ಪಷ್ಟವಾಗಿ ಅರ್ಜಿಯಲ್ಲಿ ತಿಳಿಸುವುದು. ಅಭ್ಯರ್ಥಿಯು ಅರ್ಜಿಯಲ್ಲಿ ಕೋರಿರುವ ಭಾಷೆಯಲ್ಲಿ ಮಾತ್ರ ಪ್ರಶ್ನೆ ಪತ್ರಿಕೆಯನ್ನು ನೀಡಲಾಗುವುದು. ಎರಡೂ ಭಾಷಾ ಮಾಧ್ಯಮಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಕೋರಿದಲ್ಲಿ ನೀಡಲಾಗುವುದಿಲ್ಲ.
- ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹತೆ ಪಡೆದ ಅಭ್ಯರ್ಥಿಗಳು ಪರಿಶೀಲನಾ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಪ್ರತಿಯೊಂದು ಮಾಹಿತಿಗೆ ಪೂರಕವಾದ ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂತೆ ಚಾಲ್ತಿಯಲ್ಲಿರುವ ಎಲ್ಲಾ ದಾಖಲಾತಿ : ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸಬೇಕು. ತಪ್ಪಿದಲ್ಲಿ ಸದರಿ ಅರ್ಹತೆ/ಸೌಲಭ್ಯಗಳನ್ನು ಕಳೆದುಕೊಳ್ಳುತ್ತಾರೆ. **ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.**
- ಅಭ್ಯರ್ಥಿಗಳು ನಿಗಮದ ವೆಬ್ ಸೈಟ್ www.ksrtcjobs.com ನಲ್ಲಿ ಆಗಿಂದಾಗ್ಗೆ ನೇಮಕಾತಿ/ಆನ್-ಲೈನ್ ಪ್ರಕ್ರಿಯೆಗಳ ಕುರಿತು ಆಗಿಂದಾಗ್ಗೆ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು ಹಾಗೂ ಅರ್ಜಿಯಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆಗಳಿಗೆ ಎಸ್.ಎಂ.ಎಸ್ ಮೂಲಕ ನೀಡುವ ಸೂಚನೆಗಳನ್ನು ಗಮನಿಸಿ ಅದರಂತೆ ಕ್ರಮ ವಹಿಸುವುದು.
- ನೇಮಕಾತಿಯ ಎಲ್ಲಾ ಹಂತದ ಪರೀಕ್ಷೆಗಳು ಸಂಪೂರ್ಣ ಪಾರದರ್ಶಕವಾಗಿ ನಡೆಸುತ್ತಿದ್ದು, ಅರ್ಹಗೊಂಡ ಅಭ್ಯರ್ಥಿಗಳನ್ನು ಮೆರಿಟ್/ಮೀಸಲಾತಿ ಆಧಾರದ ಮೇಲೆ ನೇಮಕ ಮಾಡಲಾಗುವುದು.

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 16-7-2018 ರ ಸಂಜೆ 5.00 ಗಂಟೆಯವರೆಗೆ.**

**ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 18-7-2018 ರ ಸಂಜೆ 5:00 ಗಂಟೆಯವರೆಗೆ.**

**ನಿರ್ದೇಶಕರು (ಸಿಬ್ಬಂದಿ:ಪರಿಸರ)**

<u>ಪ್ರತಿಯನ್ನು : ಆದರಪೂರ್ವಕವಾಗಿ :</u>

1. ಉಪ ನಿರ್ದೇಶಕರು (ಕೇಂದ್ರಸ್ಥಾನ), ಸಮಾಜ ಕಲ್ಯಾಣ ಇಲಾಖೆ, ಡಾ/ಅಂಬೇಡ್ಕರ್ ಭವನ ವಸಂತನಗರ, ಬೆಂಗಳೂರು ರವರ ಮಾಹಿತಿಗಾಗಿ.

2. ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ (ಎನ್‌ಫೋರ್ಸ್‌ಮೆಂಟ್ ಸೆಲ್) 4ನೇ ಮಹಡಿ, ಬಹುಮಹಡಿ ಕಟ್ಟಡ ಬೆಂಗಳೂರು-1 ರವರ ಮಾಹಿತಿಗಾಗಿ.
3. ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರ, ಸುಬ್ಬಯ್ಯ ರಸ್ತೆ ಬೆಂಗಳೂರು
4. ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ತರಬೇತಿ 9/1, ಶ್ರೀ. ಪ್ರಕಾಶ ಕಾಂಪ್ಲೆಕ್ಸ್ ಪಿ. ಕಾಳಿಂಗ್‌ರಾವ್ ರಸ್ತೆ ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ವಿಧಾನಸೌಧ ಬೆಂಗಳೂರು ರವರ ಮಾಹಿತಿಗಾಗಿ.
6. ಆಯುಕ್ತರು, ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಕಚೇರಿ, ಅಭಯ ಸಂಕೀರ್ಣ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ರವರ ಮಾಹಿತಿಗಾಗಿ.
7. ಎಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ರವರ ಮಾಹಿತಿ ಹಾಗೂ ಜಾಹೀರಾತು ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಕೋರಲಾಗಿದೆ.
8. ಎಲ್ಲಾ ಜಿಲ್ಲಾ ಉದ್ಯೋಗಾಧಿಕಾರಿಗಳು ರವರ ಮಾಹಿತಿ ಹಾಗೂ ಜಾಹೀರಾತು ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಹಾಗೂ ತಮ್ಮ ಉದ್ಯೋಗ ವಿನಿಮಯ ಕಛೇರಿಯಲ್ಲಿ ಹೆಸರನ್ನು ನೊಂದಾಯಿಸಿದ ಅರ್ಹ ಅಭ್ಯರ್ಥಿಗಳಿಗೆ ಈ ಹುದ್ದೆಗೆ ಅರ್ಜಿ ಸಲ್ಲಿಸಲು ಸೂಚಿಸುವಂತೆ ಕೋರಲಾಗಿದೆ.

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕರಾರಸಾನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
2. ನಿರ್ದೇಶಕರು(ಸಿಬ್ಬಂದಿ:ಪರಿಸರ) / ನಿರ್ದೇಶಕರು(ಭದ್ರತಾ&ಜಾಗೃತಿ) / ನಿರ್ದೇಶಕರು(ತಾಂತ್ರಿಕ) /ನಿರ್ದೇಶಕರು(ಹಣಕಾಸು)/ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)ರವರ ಹಿರಿಯ/ಆಪ್ತ ಕಾರ್ಯದರ್ಶಿಗಳು, ಕರಾರಸಾನಿಗಮ, ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3. ವ್ಯವಸ್ಥಾಪಕ ನಿರ್ದೇಶಕರು ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಆಪ್ತ ಕಾರ್ಯದರ್ಶಿಗಳು ರವರ ಮಾಹಿತಿಗಾಗಿ.
4. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಮಾಹಿತಿಗಾಗಿ.
6. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿಗಮ/ಬೆಂಮಸಾನಿಗಮ/ವಾಕರಸಾನಿಗಮ/ ಈಕರಸಾನಿಗಮ ರವರ ಮಾಹಿತಿಗಾಗಿ.
7. ಎಲ್ಲಾ ವಿಭಾಗ ಮುಖ್ಯಸ್ಥರು ಹಾಗೂ ಕಾರ್ಯ ವ್ಯವಸ್ಥಾಪಕರವರು, ಕರಾರಸಾನಿಗಮ/ ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಮಾಹಿತಿಗಾಗಿ ಹಾಗೂ ಈ ಜಾಹೀರಾತನ್ನು ನೌಕರರ ಮಾಹಿತಿಗಾಗಿ ಸಂಬಂಧಪಟ್ಟ ವಿಭಾಗೀಯ ಕಛೇರಿ/ಪ್ರಾದೇಶಿಕ ಕಾರ್ಯಾಗಾರ/ಘಟಕಗಳಲ್ಲಿರುವ ಸೂಚನಾ
8. ಫಲಕಗಳಲ್ಲಿ (ನೋಟೀಸ್ ಬೋರ್ಡ್) ಪ್ರಕಟಿಸಲು ಸೂಚಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)